ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ತಾಂ.ಶಿ.ಇ 03 ಸಿಡಿಸಿ(1) 2019-20

ಆಯುಕ್ತರವರ ಕಛೇರಿ
ಅರಮನೆ ರಸ್ತೆ, ಬೆಂಗಳೂರು-560 001
ದಿನಾಂಕ: 21-12-2021.

## -:ಸುತ್ತೋಲೆ:-

ವಿಷಯ:- ಇನ್ಫೋಸಿಸ್ ಸಂಸ್ಥೆಯವರು ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಿಗೆ ಉಚಿತವಾಗಿ ಸರಬರಾಜು ಮಾಡಿರುವ D-Bonded ಕಂಪ್ಯೂಟರ್ ಗಳಿಗೆ, ರೋಟರಿ ಸಂಸ್ಥೆವತಿಯಿಂದ OS ಮತ್ತು MS Office ನ್ನು ಅಳವಡಿಸುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಇನ್ಫೋಸಿಸ್ ಸಂಸ್ಥೆಯವರು ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಿಗೆ ಉಚಿತವಾಗಿ ಸರಬರಾಜು ಮಾಡಿರುವ D-Bonded ಕಂಪ್ಯೂಟರ್‌ಗಳಿಗೆ ರೋಟರಿ ಸಂಸ್ಥೆವತಿಯಿಂದ ಉಚಿತವಾಗಿ OS ಮತ್ತು MS Office ನ್ನು ಅಳವಡಿಸಲಾಗುವುದು. ಸಂಸ್ಥೆಗಳಿಗೆ D-Bonded ಕಂಪ್ಯೂಟರ್‌ಗಳು ಸರಬರಾಜು ಆದ ನಂತರ ಈಗಾಗಲೇ ನೀಡಿರುವ ಮಾರ್ಗದರ್ಶಿ ಸೂಚನೆಯನ್ವಯ, ಕಂಪ್ಯೂಟರ್‌ಗಳನ್ನು ನಿಗಧಿಪಡಿಸಿರುವ ಪ್ರಯೋಗಾಲಯಗಳಲ್ಲಿ ಜೋಡಿಸಲು ಸೂಚಿಸಿದೆ.

ಸಂಸ್ಥೆಗಳಲ್ಲಿ ಕಂಪ್ಯೂಟರ್‌ಗಳನ್ನು ಜೋಡಿಸಿದ ನಂತರ, ರೋಟರಿ ಸಂಸ್ಥೆಯವರು ಉಚಿತವಾಗಿ ನೀಡುವ OS ಮತ್ತು MS Office ತಂತ್ರಾಂಶಗಳುಳ್ಳ Pendrive ಗಳನ್ನು Speed Post ಮುಖಾಂತರ ಸಂಸ್ಥೆಯ ಪ್ರಾಚಾರ್ಯರುಗಳಿಗೆ ತಲುಪಿಸಲಾಗುವುದು. ಈಗಾಗಲೇ ಸಂಸ್ಥೆಗಳಿಗೆ ತಿಳಿಸಿರುವ ಅಳವಡಿಕೆ ಮಾರ್ಗದರ್ಶಿ ಸೂಚನೆಗಳನ್ವಯ, ಎಲ್ಲಾ ಕಂಪ್ಯೂಟರ್‌ಗಳಿಗೆ OS ಮತ್ತು MS Office ಗಳನ್ನು ಅಳವಡಿಸಿದ ನಂತರ, ಸಂಸ್ಥೆಯ ಪ್ರಾಚಾರ್ಯರು ಬಳಸಿದ Pendrive ಗಳನ್ನು ಕೂಡಲೇ ಈ ಕೆಳಕಂಡ ವಿಳಾಸಕ್ಕೆ Speed Post ಮುಖಾಂತರ ಹಿಂತಿರುಗಿಸಲು ಸೂಚಿಸಿದೆ.

ಶ್ರೀ. ನಿಕಿಲ್ ಜೆ.
ಉದ್ಯೋಗ ಕಾರ್ಯ ಪಡೆ,
ಕೊಠಡಿ ಸಂ. 208, 2ನೇ ಮಹಡಿ,
ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001.
ಮೊಬೈಲ್ ಸಂ:9964102315
ಇಮೇಲ್: corporateoutreach.dte@gmail.com

ನಿರ್ದೇಶಕರು

ಇವರಿಗೆ,
ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ

ಪ್ರತಿ: ಇ-ಆಡಳಿತ ವಿಭಾಗ, ತಾಂ.ಶಿ.ನಿ, ಬೆಂಗಳೂರು, ಡಿ.ಟಿ.ಇ. ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.